ನನ್ನ ಓದು

# ಸ್ತ್ರೀ ಸಂಕಥನದ ಹೆಣಿಗೆಗೊಂದು ಹೊಸ ಎಳೆ



ಎಂ.ಎಸ್. ಆಶಾದೇವಿ

ಹೊನ್ನು ಕುರಿತ ನಿರೂಪಣೆಗಳು, ಹೆಣ್ಣಿನ ನಿರೂಪಣೆಗಳು ಈ ಎರಡನ್ನೂ ಹೊಸದಾಗಿ ಓದಲಾಗುತ್ತಿದೆ ಅಥವಾ ಹೊಸದಾಗಿ ಬರೆಯಲಾಗುತ್ತಿದೆ. ಹೆಣ್ಣನ್ನು ಕುರಿತಂತೆ ಹೊಸ ವ್ಯಾಖ್ಯಾನಗಳನ್ನು ಕಟ್ಟಲಾಗುತ್ತಿಲ್ಲ, ಅಪವ್ಯಾಖ್ಯಾನಗಳನ್ನು ಸರಿಪಡಿಸಲಾಗುತ್ತಿದೆ. ನಿಜ ವ್ಯಾಖ್ಯಾನಗಳನ್ನು ಅನಾವರಣ ಮಾಡಲಾಗುತ್ತಿದೆ. ಇದು ತಪ್ಪುಗಂಟನ್ನು ಬಿಚ್ಚುವ ಪ್ರಯತ್ನ. ವಿಚಿತ್ರವೆಂದರೆ, ಒಂದು ಕಡೆಯಿಂದ ಬಿಡಿಸಿಕೊಳ್ಳುತ್ತಾ ಬರುವಾಗ ಮತ್ತೊಂದು ಕಡೆಯಿಂದ ಅದು ಗಂಟಾಗುತ್ತಾ ಇರುತ್ತದೆ. ಇದಕ್ಕೆ ಸ್ಥಾಪಿತ ಮೌಲ್ಯಗಳ ಜಿಗುಟುತನ ಒಂದು ಕಾರಣವಾದರೆ, ಗಂಡು-ಹೆಣ್ಣು ಇಬ್ಬರೂ ಬೇಲಿಗಳಿಂದ ಪೂರ್ಣವಾಗಿ ಹೊರ ಬರುವುದು ಇನ್ನೂ ಸಾಧ್ಯವಾಗುತ್ತಿಲ್ಲ ಎನ್ನುವುದು ಇನ್ನೊಂದು ಕಾರಣ. ಸಮಾಜ ವಿಜ್ಞಾನಿಗಳು ಹೇಳುವಂತೆ, ಬೇಲಿಗಳಿಂದ ಹೊರಬರಲು ಪ್ರಯತ್ನಿಸುತ್ತಿರುವಾಗಲೂ ನನ್ನ ಪ್ರಜ್ಞೆ ಅದನ್ನು ಬೆಂಬಲಿಸಿದಂತೆ ಎಷ್ಟೋ ಬಾರಿ ಮನಸ್ಥಿತಿ ಇದನ್ನು ಒಪ್ಪುವುದಿಲ್ಲ. ಅದು ತನ್ನ ಸುರಕ್ಷಾ ವಲಯ, ಅಧಿಕಾರ ವಲಯ ಎನ್ನುವುದನ್ನು ಮನಸ್ಸು ಅನುಮೋದಿಸಿಬಿಟ್ಟರಂತೂ ಪರಿಸ್ಥಿತಿ ಇನ್ನೂ ಕಠಿಣವಾಗಿರುತ್ತದೆ.

ಮಿಕ್ಕೆಲ್ಲ ದಮನಿತ ಲೋಕಗಳಿಗಿಂತ ಲಿಂಗ ವ್ಯವಸ್ಥೆ ಮತ್ತು ಲಿಂಗರಾಜಕಾರಣದ ಪಲ್ಲಟಗಳನ್ನು ತಾತ್ವಿಕವಾಗಿ 'ಸಾಮಾಜಿಕ ನ್ಯಾಯ'ದ ಭಿತ್ತಿಗೆ ಸೇರಿಸಿದರೂ, ಅದರ ಸವಾಲುಗಳ ವಿಷಯದಲ್ಲಿ ಇದು ಮಿಕ್ಕವುಗಳಿಗಿಂತ ಇನ್ನೂ ಆಳದ್ದು ಮತ್ತು ಸಂಕೀರ್ಣವಾದುದು. ಮೂರ್ತ ನೆಲೆಗಳ ಪಾಲು ಕಾಲುಭಾಗವಾದರೆ, ಮುಕ್ಕಾಲು ಅಮೂರ್ತ ನೆಲೆಯದ್ದು.

'ಲಿಂಗ ಒಪ್ಪಿ ಅಹುದಹುದು' ಎನ್ನುವಷ್ಟು ವಾಸ್ತವಿಕ ನೆಲೆಯಲ್ಲಿ ಲಿಂಗ ತಾರತಮ್ಯದ ವಿಚಾರಗಳನ್ನು ಚರ್ಚಿಸಲಾಗಿದೆ. ಪ್ರಭುತ್ವ, ಗಂಡಾಳಿಕೆಯ ಹಿಡಿತದ ಸಂಸ್ಥೆಗಳು ಎಲ್ಲವೂ ಇದನ್ನು ಮರುಮಾತಿಲ್ಲದೆ